# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ರಾಯಚೂರು ಜಿಲ್ಲೆ ಮತ್ತು ತಾಲ್ಲೂಕು ಗಿಲ್ಲೇಸುಗೂರು ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಇವರ ಸದಸ್ಯತ್ವ ರದ್ದುಪಡಿಸುವ ಕುರಿತು.

**ಓದಲಾಗಿದೆ:**
1. ಮಾನ್ಯ ರಾಜ್ಯ ಚುನಾವಣಾ ಆಯೋಗದ ಪತ್ರ ಸಂಖ್ಯೆ:ರಾಚುಆ/134/ಇಜಿಪಿ/2020, ದಿನಾಂಕ:30.11.2020.
2. ಸಹಾಯಕ ಆಯುಕ್ತರು, ರಾಯಚೂರು ಇವರ ಆದೇಶ ಸಂಖ್ಯೆ:ಕಂದಾಯ/ಜಾ.ಪ್ರ/2020-21, ದಿನಾಂಕ:18.12.2020.
3. ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದ ರಿಟ್ ಅರ್ಜಿ ಸಂಖ್ಯೆ:226935/2020, ದಿನಾಂಕ:04.02.2021.
4. ಸಹಾಯಕ ಆಯುಕ್ತರು, ರಾಯಚೂರು ಇವರ ಆದೇಶ ಸಂಖ್ಯೆ:ಕಂದಾಯ/ಜಾ.ಪ್ರ/2020-21, ದಿನಾಂಕ:03.08.202.
5. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಕಂ/ಚುನಾವಣೆ /ಗಾಪಂ/92/2020-21/3182, ದಿನಾಂಕ:04.09.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ.(1)ರಲ್ಲಿ ಮಾನ್ಯ ರಾಜ್ಯ ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆಯ ಮೂಲಕ ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆ-2020 ಅನ್ನು ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿ, ಮೊದಲನೇ ಹಂತದಲ್ಲಿ ದಿನಾಂಕ:22.12.2020 ರಂದು ಚುನಾವಣೆ ನಡೆಸಿ, ದಿನಾಂಕ:30.12.2020 ರಂದು ಮತ ಎಣಿಕೆ ನಡೆಸಲಾಗಿರುತ್ತದೆ. ಅದರಂತೆ ರಾಯಚೂರು ಜಿಲ್ಲೆ ಮತ್ತು ತಾಲ್ಲೂಕಿನ ಗಿಲ್ಲೇಸುಗೂರು ಗ್ರಾಮ ಪಂಚಾಯಿತಿಯ ಚುನಾವಣೆಯಲ್ಲಿ ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಇವರು ರಾಯಚೂರು ತಾಲ್ಲೂಕಿನ ಗ್ರಾಮ ಪಂಚಾಯಿತಿಯ ಪ್ರಾದೇಶಿಕ ಕ್ಷೇತ್ರವಾದ ಗಿಲ್ಲೇಸುಗೂರು-2ರ ಮೂರು ಸದಸ್ಯ ಸ್ಥಾನಗಳ ಪೈಕಿ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾಗಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(2)ರ ಆದೇಶದಲ್ಲಿ ರಾಯಚೂರು ಜಿಲ್ಲೆಯ ಮತ್ತು ತಾಲ್ಲೂಕಿನ, ಗಿಲ್ಲೇಸುಗೂರು-2 ಗ್ರಾಮ ಪಂಚಾಯಿತಿಯ ಸದಸ್ಯ ಸ್ಥಾನಗಳ ಪೈಕಿ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರಕ್ಕೆ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಇವರು ಆಯ್ಕೆಯಾಗಿರುತ್ತಾರೆಂದು ಶ್ರೀ ಮೇಘನಾಥ ಇವರು ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಈ ದೂರನ್ನು ಕೂಲಂಕಷವಾಗಿ ಪರಿಶೀಲಿಸಿ, ಬೊಯ ಪದ್ಮಾವತಿ ಅಲಿಯಾಸ್ ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ರವರು ಹಾಜರಾಗಿ ತನಗೆ ಮತ್ತು ತನ್ನ ತಂದೆಯವರಿಗೆ ಆಂದ್ರ ಸರ್ಕಾರದವರು ನೀಡಿದ ಹಿಂದುಳಿದ ವರ್ಗ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಆದಕಾರಣ ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಅಲಿಯಾಸ್ ಪದ್ಮಾವತಿ ಪರಿಶಿಷ್ಟ ಪಂಗಡ ಜಾತಿಗೆ ಸೇರಿರುವುದಿಲ್ಲವೆಂದು ಕಂಡು ಬಂದಿದ್ದು, ಪ್ರಯುಕ್ತ ತಹಶೀಲ್ದಾರ್, ರಾಯಚೂರು ರವರು ದಿನಾಂಕ:07.12.2020 ರಂದು ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಅಲಿಯಾಸ್ ಪದ್ಮಾವತಿ ಇವರಿಗೆ ನೀಡಿದ ಪರಿಶಿಷ್ಟ ಪಂಗಡ ಬೇಡರ (ನಾಯಕ) ಜಾತಿ ಪ್ರಮಾಣವನ್ನು ರದ್ದುಪಡಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(3)ರಲ್ಲಿ ಸಹಾಯಕ ಆಯುಕ್ತರು, ರಾಯಚೂರು ಜಿಲ್ಲೆ ಇವರು ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಅಲಿಯಾಸ ಪದ್ಮಾವತಿ ಪರಿಶಿಷ್ಟ ಪಂಗಡ ಜಾತಿಗೆ ಸೇರಿರುವುದಿಲ್ಲವೆಂದು ಕಂಡು ಬಂದಿದ್ದು,

ಪ್ರಯುಕ್ತ ತಹಶೀಲ್ದಾರ್, ರಾಯಚೂರು ರವರು ದಿನಾಂಕ:07.12.2020 ರಂದು ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಅಲಿಯಾಸ್ ಪದ್ಮಾವತಿ ಇವರಿಗೆ ನೀಡಿದ ಪರಿಶಿಷ್ಟ ಪಂಗಡ ಬೇಡರ (ನಾಯಕ) ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿದ ಆದೇಶವನ್ನು ಪ್ರಶ್ನಿಸಿ, ರಾಜ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:226935/2020 (LA-ELE) ರಲ್ಲಿ ದಾಖಲಿಸಿದ್ದು, ಈ ಅರ್ಜಿಯ ವಿಚಾರಣೆ ಮಾಡಿ, ಮಾನ್ಯ ನ್ಯಾಯಾಲಯವು ದಿನಾಂಕ:04.02.2021ರಂದು ಆದೇಶಿಸಿರುವ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿದೆ.

"The Order passed by the Assistant Commissioner No.Revenue/CC/2020-21, dated:18.12.2020 produced at Annexure-E is quashed. The matter is remanded to the 4$^{th}$ respondent Assistant Commissioner for fresh consideration, in accordance with law"

ಮೇಲೆ ಓದಲಾದ ಕ್ರ.ಸ.(4)ರ ಆದೇಶದಲ್ಲಿ ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಗಿಲ್ಲೆಸುಗೂರು ರವರ ಜಾತಿಯನ್ನು ನಿರ್ಧರಿಸುವಾಗ ಸರ್ಕಾರದ ಕಾಯ್ದೆ, ಆದೇಶ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಗಮನದಲ್ಲಿರಿಸಿಕೊಂಡು, ಕೇವಲ ಶಾಲಾ ದಾಖಲಾತಿ ಆಧರಿಸಿ ಜಾತಿ ನಿರ್ಧರಿಸದೇ ನ್ಯಾಯಾಲಯದ ತೀರ್ಪುಗಳಲ್ಲಿನ ಅಂಶಗಳನ್ನು ಆಧರಿಸಿ ಕ್ರಮ ಕೈಗೊಳ್ಳಲು ಒಂದು ಸಮಿತಿ ರಚಿಸಿ, ಗ್ರಾಮಕ್ಕೆ ಖುದ್ದು ಭೇಟಿ ನೀಡಿ ದಾಖಲೆಗಳನ್ನು ಪಂಚನಾಮ ಸಹಿತ ಸ್ಪಷ್ಟವಾದ ವರದಿ ಪಡೆದು ವಾದಿ ಪ್ರತಿವಾದಿಗಳ ಲಿಖಿತ ವಾದಾಂಶಗಳನ್ನು ಪರಿಶೀಲಿಸಿ, ದಾಖಲೆಗಳ ಆಧಾರದ ಮೇಲೆ ಮತ್ತು ಸಮಿತಿ ವರದಿ ಆಧಾರದ ಮೇಲೆ ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತ ಇತರ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮೀಸಲಾತಿ ಇತ್ಯಾದಿ) ಕಾಯ್ದೆ-1990ರ ಕಲಂ 4B(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಜಾತಿ ಪ್ರಮಾಣ ಪತ್ರ ಸುತ್ತೋಲೆ ಪ್ರಕಾರ ಪರಿಶಿಷ್ಟ ಪಂಗಡ ಜಾತಿಯ ಪಟ್ಟಿಯಲ್ಲಿ ಬೋಯಾ ವಾಲ್ಮೀಕಿ ಎಂದು ಇರದ ಪ್ರಯುಕ್ತ ಸದರಿಯವರ ಹೇಳಿಕೆ ಪ್ರಕಾರ ಆಂಧ್ರ ಪ್ರದೇಶದ ಜಾತಿ ಪ್ರಮಾಣ ಪತ್ರ ಹಾಗೂ ವರ್ಗಾವಣೆ ಪ್ರಮಾಣ ಪತ್ರದಲ್ಲಿ ತಂದೆ, ತಾಯಿ, ತಂಗಿಯರು ಶ್ರೀಮತಿ ರೇಣುಶ್ರೀ @ ಮುಗತಿ ಮಂಜುಳಾ (ಅರ್ಜಿದಾರರು) ಸಹ ಬೋಯಾ ವಾಲ್ಮೀಕಿ ಜಾತಿಯು ಹಿಂದುಳಿದ ವರ್ಗಕ್ಕೆ ಒಳಪಟ್ಟಿರುತ್ತದೆ. ಆದ ಕಾರಣ ಶ್ರೀಮತಿ ರೇಣುಶ್ರೀ @ ಮುಗತಿ ಮಂಜುಳಾ ಗಂಡ ಶ್ರೀ ರಾಮಕೃಷ್ಣ ರವರಿಗೆ ತಹಶೀಲ್ದಾರ್, ರಾಯಚೂರು ರವರು ದಿನಾಂಕ:07.12.2020 ರಂದು ನೀಡಿದ ಬೇಡರ (ನಾಯಕ) ಪರಿಶಿಷ್ಟ ಪಂಗಡ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(5)ರಲ್ಲಿ ರಾಯಚೂರು ಜಿಲ್ಲೆ ಮತ್ತು ತಾಲ್ಲೂಕಿನ ಗಿಲ್ಲೇಸೂಗೂರು ಗ್ರಾಮ ಪಂಚಾಯಿತಿಯ ಪ್ರಾದೇಶಿಕ ಕ್ಷೇತ್ರವಾದ ಗಿಲ್ಲೇಸುಗೂರು -2ರ ಮೂರು ಸದಸ್ಯ ಸ್ಥಾನಗಳ ಪೈಕಿ ಇರುವ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ಶ್ರೀಮತಿ ರೇಣುಶ್ರೀ ಇವರು ಎಸ್.ಟಿ. ಮೀಸಲು ಕ್ಷೇತ್ರದಿಂದ ಆಯ್ಕೆಯಾದ ಇವರ ಜಾತಿ ಪ್ರಮಾಣ ಪತ್ರ ರದ್ದಾಗಿರುವುದರಿಂದ ಇವರ ಸದಸ್ಯತ್ವ ರದ್ದುಪಡಿಸುವ ಕುರಿತು ಸೂಕ್ತ ಆದೇಶ ನೀಡುವಂತೆ ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಿ, ಶ್ರೀಮತಿ ರೇಣುಶ್ರೀ ಗಂಡ ರಾಮಕೃಷ್ಣ ಇವರು ರಾಯಚೂರು ಜಿಲ್ಲೆ ಮತ್ತು ತಾಲ್ಲೂಕು ಇವರು ಎಸ್.ಟಿ. ಮೀಸಲು ಕ್ಷೇತ್ರದಿಂದ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಆಯ್ಕೆಯಾಗಿರುವುದರಿಂದ ಮತ್ತು ಇವರ ಜಾತಿ ಪ್ರಮಾಣ ಪತ್ರ ರದ್ದುಪಡಿಸಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 11 ಮತ್ತು 43(ಎ)ರಡಿ ಪಂಚಾಯಿತಿ ಸದಸ್ಯತ್ವದಿಂದ ತೆಗೆದುಹಾಕಲು ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್

ಅಧಿನಿಯಮ, 1993ರ ಪ್ರಕರಣ 12(ಎಲ್) ಸಿ(ಎಫ್)ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಲು ನಿರ್ಧರಿಸಿ, ಅದರಂತೆ ಈ ಕೆಳಕಂಡ ಆದೇಶ.

## <u>ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿಆರ್ 132 ಜಿಪಿಎಸ್ 2021, ಬೆಂಗಳೂರು, ದಿನಾಂಕ: 03.12.2021.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಯಚೂರು ಜಿಲ್ಲೆ ಮತ್ತು ತಾಲ್ಲೂಕಿನ ಗಿಲ್ಲೇಸೂಗೂರು ಗ್ರಾಮ ಪಂಚಾಯಿತಿಯ ಪ್ರಾದೇಶಿಕ ಕ್ಷೇತ್ರವಾದ ಗಿಲ್ಲೇಸುಗೂರು -2ರ ಮೂರು ಸದಸ್ಯ ಸ್ಥಾನಗಳ ಪೈಕಿ ಇರುವ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ಶ್ರೀಮತಿ ರೇಣುಶ್ರೀ ಇವರು ಎಸ್.ಟಿ. ಮೀಸಲು ಕ್ಷೇತ್ರದಿಂದ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಆಯ್ಕೆಯಾಗಿದ್ದು, ಇವರ ಜಾತಿ ಪ್ರಮಾಣ ಪತ್ರ ರದ್ದಾಗಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993, ಪ್ರಕರಣ 11 ಮತ್ತು 43(ಎ)ರಡಿ ಪಂಚಾಯಿತಿ ಸದಸ್ಯತ್ವದಿಂದ ತೆಗೆದುಹಾಕಲು ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 12(ಎಲ್) ಸಿ(ಎಫ್) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

3/12/21
**(ಚೇತನ ಎಂ)**
ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಆಯುಕ್ತರು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಬೆಂಗಳೂರು.
3. ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ, ರಾಯಚೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ,.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ರಾಯಚೂರು, ರಾಯಚೂರು ಜಿಲ್ಲೆ.
6. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಿಲ್ಲೇಸುಗೂರು ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.
7. ಅಧ್ಯಕ್ಷರು, ಗಿಲ್ಲೇಸುಗೂರು ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ ಇವರಿಗೆ.
3. ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.